Regd No M 1299 34 th Year ಶಾಖೆ 27—7—51

SATYAVADI

ಸತ್ಯವಾದಿ

ಸ್ಥಾಪಕರು: ಆರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ಬಿಡಿ ಪ್ರತಿ 3 ಸೈ

ದಿವ್ಯವಾಣಿ

ಹಿರಿಯುಂಲ್ಲಿ ವಿನಯ ಕರ್ತವ್ಯ; ಸಮಾಸದಲ್ಲಿ ವಿನಯ ಶಿಷ್ಟಾಚಾರ; ಕಿರಿಯರಲ್ಲಿ ವಿನಯ ಔದಾರ್ಯವೆನಿಸುವದು. ಎಲ್ಲರೊಡನೆಯೂ ವಿನಯವಂತರೂ ಸುರಕ್ಷಿತತೆಗೆ ಅವಶ್ಯ

— ಸಂ' ಥಾಮಸ್' ಮೋರ್'

ಸರ್ಕಾರಿ ಪ್ರಕಟಣೆ

ಬೆಂಗಳೂರು — 28 ನೇ ತಾ|| ಶ್ರೀ ಪುಟ್ಟಣ್ಣಚೆಟ್ಟರ ಪುರಭವನದಲ್ಲಿ ಸಾರ್ವಜನಿಕ ಸಭೆ ಏರ್ಪಾಟಾಗಿದೆ. ಕೋಲಾರ ಜಿಲ್ಲೆಯ ಸೆಟ್ಟಿಮಾಡಮಂಗಲ ಗ್ರಾಮಕ್ಕೆ ಗಿಡ ನೆಟ್ಟುದರ ಬಗ್ಗೆ ಅಖಿಲ ಭಾರತ ಪದಕವನ್ನು ಕೊಡಲಾಗಿದೆ. ಭಾರತ ಸರ್ಕಾರದ ಆಹಾರ ಸಚಿವ ಶ್ರೀ ಕೆ. ಎಂ. ಮುನ್ಷಿ ಸಮಾರಂಭದ ಅಧ್ಯಕ್ಷತೆ ವಹಿಸಿ ಪದಕವನ್ನು ಕೊಡುವರು.

1940 ನೇ ಕೇಂದ್ರ ವ್ಯಾಪಾರ ಗುರುತಿನ ಶಾಸನವನ್ನು ಇದೇ ಏಪ್ರಿಲ್ 1 ನೆ ತಾ| ನಿಂದ ಮೈಸೂರು ಸಂಸ್ಥಾನಕ್ಕೆ ವಿಸ್ತಯಿಸಲಾಗಿದೆ.

ಈ ತಿಂಗಳ 15 ಕ್ಕೆ ಕೊನೆಯಾದ ಅರ್ಧ ತಿಂಗಳಿಗೆ ಆಹಾರ ಉತ್ಪಾದನಾ ಚಳವಳಿದ ಸುಕ್ಷಿಪ್ತ ವರದಿಯನ್ನು ಮೈಸೂರು ಸರ್ಕಾರ ಪ್ರಕಟಿಸಿದೆ.

8ಮಂದಿಗೆ ಗಲ್ಲು

ಚಕ್ರವರ್ತಿ ಹೈಲಿ ಸೆಲಾಸಿ ಕೊಲೆ ಪತ್ತಾರಿ ಸಂಬಂಧದಲ್ಲಿ ನಿನ್ನೆ 8 ಮಂದಿಗಳ್ಲಿಗೇರಿದ ವಾರ್ತೆ ಅಡೀಸ್ ಅಬಾಬದಿಂದ ಬಂದಿದೆ.

—ರೈಲ್ವೆ ಮುಷ್ಕರ ಸಾಮೂಹಿಕ ಹಿಸುವೆಗೆ ಅಸ್ಪದ ಕೊಡುವದಾಗಿ ಕಾಂಗ್ರೆಸ ಕಾರ್ಯದರ್ಶಿ ಶ್ರೀ ಗೌತಂ ದಿಲ್ಲಿಯಲ್ಲಿ ತಿಳಿಸಿದ್ದಾರೆ.

ಅಮೇರಿಕಾಕ್ಕೆ ಎದೇಶಾಂಗ ನೀತಿಯೇ ಇಲ್ಲವೆಂದು ಜನರಲ್ ಮೆಕಾರ್ಥರ್ ತಿಳಿಸಿರುವದಾಗಿ ಬೋಸ್ಟನ್ ವಾರ್ತೆ.

ವಾರ್ತೆಗಳು

ಕೇಂದ್ರ ಸಚಿವ ಸಂಪುಟಕ್ಕೆ ರಫಿ ಅಹಮದ್ ಕಿದ್ವಾಯಿ ರಾಜೀನಾಮೆ ಕೊಡುವ ನಿರ್ಧಾರಕ್ಕೆ ಬಂದಿರುವದಾಗಿ ದೆಹಲಿ ವಾರ್ತೆ. ಅವರು ಪ್ರಜಾಪಕ್ಷ ಸಂಘಟನೆಗೆ ಪೂರ್ಣ ದುಡಿವಂತೆ.

ಜೋಧಪುರ ವಿಭಾಗದಲ್ಲಿ ಧಾನ್ಯದ ಬೆಲೆ ಏರಿದುದರ ಪರಿಣಾಮವಾಗಿ ರಾಜಸ್ಥಾನ ಸರ್ಕಾರ ಅಲ್ಲಿಗೆ 140000 ಮಣ ಧಾನ್ಯವನ್ನು ಬೆಲೆ ಇಳಿಯುಲು ಕಳಿಸಿದೆ.

ಪಶ್ಚಿಮ ಬಂಗಾಳ ಪ್ರಾಂತೀಯ ಕಮ್ಯುನಿಸ್ಟ್ ಪಕ್ಷ ಸಲಹೆ ಇತ್ತು ಭಾರತ ಪಾಕಿಸ್ತಾನಗಳು ಸಮರ ನಿರೋಧ ಒಡಂಬಡಿಕೆ ಮಾಡಿಕೊಳ್ಳಬೇಕೆಂದು ಸೂಚಿಸಿದೆ. ಹೀಗೆಂದು ಕಲ್ಕತ್ತಾ ವಾರ್ತೆ

ಬೆಂಗಳೂರು ರೇಷನಿಂಗ್ ಇಲಾಖೆಯವರು 8 ಸಹಸ್ರ ಕಳ್ಳ ರೇಷನ್ ಕಾರ್ಡುಗಳನ್ನು ಈ ವರ್ಷ ಜನವರಿಯಿಂದ ಮೇ ತಿಂಗಳ ವರಿಗೆ ಪತ್ತೆ ಮಾಡಿದ್ದಾರೆ

ಪಶ್ಚಿಮ ಬಂಗಾಳ ಗವರ್ನರ್ ಡಾ| ಕೈಲಾಸನಾಥ ಖಟ್ಜು ಕಲ್ಕತ್ತಾದಲ್ಲಿ ಹೇಳಿಕೆ ಇತ್ತು ಭಾರತ-ಪಾಕಿಸ್ತಾನಗಳು ಯುದ್ಧ ಮಾಡಿದರೆ ದ್ವಿರಾಷ್ಟ್ರಗಳಿಗೆ ತುಂಬ ನಷ್ಟವುಂಟಾಗುವದಾಗಿ ತಿಳಿಸಿದರು.

ಗೃಹ ಸಚಿವ ಶ್ರೀ ಮೊರಾರ್ಜಿದೇಸಾಯರು ಬೊಂಬಾಯಿನಲ್ಲಿ ಹೇಳಿಕೆ ಇತ್ತು ಕಳೆದ ಏಪ್ರಿಲಿನಲ್ಲಿ ನಡೆದ ಅಖಿಲ ಡ್ಸ ಬೇಕಿನ ದರೋಡೆ ವಿಚಾರಣೆ ಇನ್ನೆರಡು ವಾರಗಳಲ್ಲಿ ಪ್ರಾರಂಭವಾಗುವದೆಂದು ತಿಳಿಸಿರುವರು.

ರಷ್ಯದ ಪ್ರಾಣಿಶಾಸ್ತ್ರಜ್ಞ ಪ್ರವೀಣ ಡಾ|| ಇವಾನೋವ್ ಲೂದಿಯಾನದಲ್ಲಿ ಹೇಳಿಕೆ ಇತ್ತು ಭಾರತದಲ್ಲಿ ಮಿಡತೆಗಳ ಹಾವಳಿ ತಡೆಗಟ್ಟಲು ರಷ್ಯ ಸಹಕರಿಸುವದಾಗಿ ತಿಳಿಸಿದರು.

ಪಾಕ್'ನಲ್ಲಿ ಶಾಸನ ಜಾರಿ

ನಾಗರೀಕ ಸಂರಕ್ಷಣ ಶಾಸನವನ್ನು ಪಾಕಿಸ್ತಾನ ನಿನ್ನೆ ರಾತ್ರಿ ಘೋಷಿಸಿತು

ಕರಾಚಿಗೆ ಬರಲು ಪಂ. ನೆಹರೂಗೆ ಆಮಂತ್ರಣ !

ಕರಾಚಿ : ಪಾಕಿಸ್ತಾನದ ಪ್ರಧಾನಿ ಲಿಯಾಕತ್ ಅಲಿ ಖಾರ್ರವರು ಪಂ| ನೆಹರುವಿಗೆ ಕರಾಚಿಗೆ ಬಂಲು ಆಮಂತ್ರಣ ಕಳಿಸಿದ್ದಾರೆ. ಎರಡೂ ರಾಷ್ಟ್ರಗಳ ಸ್ನೇಹಬಾಂಧವ್ಯ ಹಾಗೂ ಶಾಂತಿ ಸಂರಕ್ಷಣೆ ಸಂಸ್ಥಾಪಿಸುವ ಬಗ್ಗೆ 5 ಅಂಶಗಳನ್ನು ಆಮಂತ್ರಣದಲ್ಲಿ ತಿಳಿಸಿದ್ದಾರೆ. ಪಾಕ್ ಗಡಿಯಲ್ಲಿ ಜಮ್ಮಾವಣೆ ಆಗಿರುವ ಭಾರತ ಸೇನೆಯನ್ನು ವಾಪಸು ಕರೆಸಿದ ತಕ್ಷಣ ಈ ಭೇಟಿ ನೆರವೇರಬಹುದೆಂದು ಅವರು ತಿಳಿಸಿದ್ದಾರೆ.

ಪಂ. ನೆಹರು ಅಂಗೀಕರಿಸುವುದಿಲ್ಲ?

ನವದೆಹಲಿ : ಪ್ರಧಾನಿ ಲಿಯಾಕತ್ ಅಲಿ ಖಾರ್ರವರು ಕರಾಚಿಗೆ ಬರಬೇಕೆಂದು ಕಳಿಸಿರುವ ಆಮಂತ್ರಣದಲ್ಲಿ ಷರತ್ತುಗಳಿರುವುದರಿಂದ ಪಂ|| ನೆಹರು ಆಮಂತ್ರಣವನ್ನು ಅಂಗೀಕರಿಸಲಾರರೆಂದು ತಿಳಿದುಬಂದಿದೆ

* ಬ್ರಿಟಿಷ್ ಅಧಿಕಾರಿಗಳು ಕಾಶ್ಮೀರ ಬಿಕ್ಷುಟ್ಟ ಬಗಡಾಯಿಗಳು ಪಾಕಿಸ್ತಾನಕ್ಕೆ ಸಹಾಯ ಮಾಡಿದರೆಂಬುದು ಸತ್ಯವಿದೂರವಾದುದು ಎಂದು ಪ್ರಧಾನಿ ಅಟ್ಲಿ ಕಾಮನ್ಸ್‌ಸಭೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನಲ್ಲಿ ಬಾಲಕಿ ಮೇಲೆ ಐವರ ಅತ್ಯಾಚಾರ !

ಮೈಸೂರು — ಕೃಷ್ಣರಾಜ ಪೋಲೀಸರು ಅತ್ಯಾಚಾರದ ತನಿಖೆ ನಡೆಸುತ್ತಿರುವರು. ಅರಮನೆ ಕೋಟೆ ಮೊಹಮ್ಮದೀಯರ ದೇವಾಲಯ ಬಳಿ ಕಮಲ ಎಂಬ 14 ವರ್ಷದ ಹುಡುಗಿಯನ್ನು ನಾರಾಯಣ ಎಂಬವನು ವಿತ್ತರ ನಾಲ್ಕು ಮಂದಿ ಅಪಹರಿಸಿ ಚರ್ಚ್ ಬಳಿಯ ಹೋಟಲಿಗೆ ಕರೆದೊಯ್ದು ಕೋಣೆಯೊಂದನ್ನು ಬಾಡಿಗೆಗೆ ಪಡೆದು ಹುಡುಗಿಯ ಮೇಲೆ ಅತ್ಯಾಚಾರ ಮಾಡಿದರೆಂದು ಗೊತ್ತಾಗಿದೆ. ಹುಡುಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲಾಗಿದ್ದಾಳೆಂದು ತಿಳಿದುಬಂದಿದೆ. ಸ್ಥಿತಿ ಚಿಂತಾಜನಕ

ಆರ್ಡಿನೆನ್ಸು ಹಬ್ಬ

ಮಾರ್ಚಿಯಲ್ಲಿ ನಡೆದ ಇಂಜಿನಿಯರಿಂಗ್ ಆರ್ಡಿನೆನ್ಸು ಕೊಟ್ಟರೂ ಪಟ್ಟ ಮೈಸೂರು ಯೂನಿವರ್ಸಿಟಿ ಪ್ರಕಟಿಸಿದೆ ಸತ್ಯವಾದಿ ಕಚೇರಿಲೂ ಕಾಣಬಹುದು

— ಕೆಂಪು ಚೀನದಲ್ಲಿ ಅರ್ಧಕ್ಕೊಟ ಸುಸಜ್ಜಿತ ಪಡೆ ಇರುವದಾಗಿ ಹಾಂಕಾಂಗ್ ವಾರ್ತೆ.

ಕೆಂಪು ಕೊರಿಯಾ ಮತ್ತು ಕೆಂಪು ಚೀನಗಳಿಗೆ ಭಾರತ ಸಮರೋಪಕರಣಗಳನ್ನು ಕಳಿಸುತ್ತಿಲ್ಲವೆಂದು ವಿಶ್ವಸಂಸ್ಥೆಗೆ ಬರೆದಿದೆ.

ರಾಮರಾಜ್ಯ ಪರಿಷತ್‌ನ್ನು ಬಲಯುತ ಮಾಡಿ

(ಸ್ವಂತ ಸುದ್ದಿಗಾರರಿಂದ ತಂತಿ)

ಸೂರತ್ ಜುಲೈ 26— ಅಖಿಲ ಭಾರತ ರಾಮರಾಜ್ಯ ಪರಿಷತ್ತಿನ ಅಧ್ಯಕ್ಷಣಿ ರಾಜಕುಮಾರಿ ಪ್ರಭಾವತಿ ರಾಜೀಯವರು ಬುಲ್ಸಾರನಲ್ಲಿ ಭಾಷಣ ಮಾಡಿ, ಸೂರತ್ತಿಗೆ ತಾ|| 24 ರಲ್ಲಿ ಆಗಮಿಸಿ, ಬಹು ವೈಭವದಿಂದ ಸ್ವಾಗತಿಸಲ್ಪಟ್ಟರು ತಾ || 24 ಮತ್ತು 25 ರಲ್ಲಿ ವಿಠಲವಾಡಿಯಲ್ಲಿ ಶ್ರೀ ದ್ವಾರಕಾ ಶಾರದಾ ಪೀಠದ ಜಗದ್ಗುರು ಶಂಕರಾಚಾರ್ಯ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಭಾರಿ ಸಭೆಗಳು ನಡೆದವು ಗೋಸ್ವಾಮಿ ಶ್ರೀ ರಾಜರತ್ನಲಾಲ್‌ಜೀಯವರೂ ದಯಮಾಡಿಸಿದ್ದರು ತಾ || 24 ರಲ್ಲಿ ಪ್ರಭಾವತಿ ರಾಜೀಯವರು ತಮ್ಮ ಹೃದಯಂಗಮ ಭಾಷಣದಲ್ಲಿ ರಾಮರಾಜ್ಯದ ಆದರ್ಶಗಳನ್ನೂ, ತಾತ್ಕಾಲಿಕ ಭಾರತ ಸಮಸ್ಯೆಗಳನ್ನೂ ವಿವರಿಸಿ, ರಾಮರಾಜ್ಯ ಪರಿಷತ್ತನ್ನು ಬಲಪಡಿಸಲು ಸಾರ್ವಜನಿಕರನ್ನು ಕೋರಿದರು; ಮತ್ತು ಅದರ ಉಮೇದುವಾರರಿಗೇ ವೋಟು ಕೊಡಬೇಕೆಂದೂ ಕೋರಿದರು ; ತನ್ಮೂಲಕ ಗೋವಧಾ ನಿರೋಧ, ಹಿಂದೂ ಕೋಡು, ಮುಂತಾದವು ಪರಿಹಾರವಾಗಿ, ಭಾರತವನ್ನು ನಿಜವಾಗಿಯೂ ಪುರೋಭಿವೃದ್ಧಿಗೊಳಿಸಲಾಗುವುದೆಂದರು. ಶ್ರೀ ಜಗದ್ಗುರುಗಳವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಸಾರ್ವಜನಿಕರು ಸಂಘಟನೆಗೊಳ್ಳಬೇಕೆಂದು ಕೋರಿದರು. ಪ್ರಭಾವತಿ ರಾಜೀಯವರು ಇಂದು ಬರೋಡಾಕ್ಕೂ, ನಾಳೆ ಅಹಮದಾಬಾದಿಗೂ ಬರುವರು, ಅಖಿಲ ಭಾರತ ರಾಮರಾಜ್ಯ ಪರಿಷತ್ತಿನ ಕಾರ್ಯದರ್ಶಿ ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಗುಜರಾತಿನಲ್ಲಿ ಎರಡು ತಿಂಗಳು ಪ್ರವಾಸ ಮಾಡುವರು.

ನೀ ಹೇಳು

ದೇಶದೊಳಿರುವಾ
ರೇಷನ ರೂಲದು
ವೇಶವ ಬದಲಿಸಿ ಬಂದಿಹುದು |
ಕಾಸೇ ಇಲ್ಲದ
ದೇಶದ ಜನಕೆ
ಮುಷ್ಠಣದ ದಾರಿಯ ತೋರಿಪುದು || ೧ ||

ಹಿಂದಿನ ರೇಷನ್
ಒಂದಿಷ್ಟಾದರು
ನಿಂದಲ್ಲಿಗೆ ದೊರಕುತಲಿತ್ತು |
ಸುಂದರ ಜೀವನ
ಮಂದಿಯು ಬಯಸುತ
ಹೊಂದಿತು ಮಸಣದ ಸತ್ಪಥವ || ೨ ||

ಸೊಕ್ಕಿದ ಜನರಿಗೆ
ಅಕ್ಕಿಯು ಹೆಚ್ಚಿಗೆ
ಸಿಕ್ಕುವ ರೀತಿಯು ಸುಲಭವದು |
ಅಕ್ಕಿಗೆ ಸೇರಿಗೆ
ಸಿಕ್ಕಾಒಟ್ಟೆಯ
ನಾಲ್ಕಾರ್ ಪಾವಲಿ ಕ್ರಯವಿಹುದು || ೩

ಉಣ್ಣುವ ಕಾರ್ಯಕೆ
ಸೊನ್ನೆಯು ಬೀಳುತ
ಬನ್ನವ ಪಡುತಿದೆ ದೇಹವಿದು
ಎನ್ನುವ ನಿರ್ಣಯ
ಮುನ್ನಿನ ರೂಲದು
ಚೆನ್ನಾಗಿತ್ತೈ ನೀ ಹೇಳು || ೪ ||

ಸಾ ಥಿ

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ನೆಹರುರವರ ಹಿತ್ತಾಳೆಯ ಪ್ರತಿಮೆ

ಥಿಲ್ಲಿಯ ಸ್ಕೋಟ್ಸ್ ಸ್ಪೇಡಿಯನ್ ದಲ್ಲಿ ಒಂದು ಪ್ರಮುಖ ಸ್ಥಾನದಲ್ಲಿ ಇರಿಸುವ ಬಗ್ಗೆ ಭಾರತದ ಪ್ರಧಾನ ಪಂಡಿತ ಜವಹರಲಾಲ ನೆಹರೂರವರ ಅರ್ಧ ದೇಹಾಕೃತಿಯ ಹಿತ್ತಾಳೆಯ ಪ್ರತಿಮೆಯೊಂದು ಪ್ರಸಿದ್ಧ ಬ್ರಿಟಿಷ್ ಶಿಲ್ಪಿ ಫ್ರೆಡ್ಡಾ ಬ್ರಿಲಿಯೌಟ್ ಇವಳ ಕೈಯಿಂದ ತಯಾರಾಗಿದೆ ಅದನ್ನು ಭಾರತಕ್ಕೆ ಕಳಿಸುವ ಸಿದ್ಧತೆ ನಡೆಯುತ್ತಿದೆ. ಕಳೆದ ವರ್ಷ ಲಂಡನ್ ಮಾನವಾಗಿ ಸಂಯುಕ್ತ ಅಮೇರಿಕಕ್ಕೆ ತೆರಳುವ ಕಾಲದ ದಲ್ಲಿ ಮೂರು ಬಾರಿ ಪಂಡಿತ ನೆಹರುರವರು ಫ್ರೆಡ್ಡಾಳ ಮುಂದೆ ಕೂತು ವಿಗ್ರಹಕ್ಕೆ ಭಂಗ ಕೊಟ್ಟಿದ್ದರು ಈ ವರ್ಷದ ಆರಂಭದಲ್ಲಿ ಕಮನ್‌ವೆಲ್ತ್ ಪ್ರಧಾನರುಗಳ ಸಮ್ಮೇಳನಕ್ಕೆ ಲಂಡನಿಗೆ ಹೋಗಿದ್ದಾಗ ನೆಹರುರವರು ಫ್ರೆಡ್ಡಾಳ ಕಲಾಕೃತಿಯ ರಚನೆಯನ್ನು ಪರೀಕ್ಷಿಸಿದರು.

ಜಯಲಕ್ಷ್ಮೀ ಪ್ರಿಂಟಿಂಗ್ ವರ್ಕ್ಸ್

ಈವಿನಿಂಗ್ ಬಜಾರ್
ಶಿವಂತಾಪೇಟೆ ಮೈಸೂರು

ನಮ್ಮಲ್ಲಿ ಮುದ್ರಣ ಕೆಲಸಗಳು ಸುಂದರವಾಗಿಯೂ, ಸಕಾಲದಲ್ಲೂ, ಸುಲಭ ಛಾರ್ಜಿನಲ್ಲೂ ಮಾಡಿಕೊಡಲಾಗುವುದು.

ಸತ್ಯವಾದಿ ಸೋಮವಾರ ಸಂಚಿಕೆ
ವಾರ್ಷಿಕ ಚಂದಾ
ಅಂಚೆವೆಚ್ಚ ಸಮೇತ 1-14-0

ಉಡ್‌ಲ್ಯಾಂಡ್ಸ್

— 4 ನೇ ವಾರ —

ದುಲ್ಖುಷ್ ಪಂಜೋಲಿಯವರ

ನಗೀನಾ

— ಪಾತ್ರ —

ನೂತನ್, ನಾಸಿರ್ ಖಾನ್, ಗೋಪ್

ಪ್ರತಿ ದಿನ 3 ಪ್ರದರ್ಶನಗಳು

= OPERA =

July 27th

711 Ocean Drive

Filmed Under Police Protection

Starring — Edmund O'brien, Joan Dru, Otto Kruger

— Next —

Elizebeth Ladymead

(Technicolor)



"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯಲಿ

ರಣಜಿತ್ ಅಮೋಘ 4 ನೇ ವಾರ

ಅಶೋಕ್ ಕುಮಾರ್ ನಿಮ್ಮಿ, ದಿಲೀಪ್‌ಕುಮಾರ್, ನರ್ಗಿಸ್ ನಟಿಸಿರುವ

ದೀದಾರ್ [ಹಿಂದಿ] Deedar

ಪ್ರತಿ ದಿನ 3 ಆಟಗಳು

ಐ. ಟಿ. ಎಲ್. ಗ್ಲೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ಗ್ಲೈಪ್ ಸಿರಪ್

Edited, Printed and Published by M. S. Krishna Rao. at the Satyavadi Press Chamrajpuram Mysore